# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2018-20
Date of Posting, Kodialbail Post Office
on 12th of every Month

ಸಂಪುಟ-9 Reg. No. : KARBIL / 2005 / 16123 ಡಿಸೆಂಬರ್ - 2020 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ - 12 ಪ್ರಕಟಣೆ : 10-12-2020



● e-mail : jnanashakthisss@gmail.com ● whatsapp : 7795116598 ● Mobile : 9343361618


# ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಹಾಸಭೆ



ವಾರ್ಷಿಕೋತ್ಸವ – ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕ ಮಹಾಸಭೆಯು ತಾರೀಕು 29–11–2020ನೇ ರವಿವಾರ ಸದನದಲ್ಲಿ ನಡೆಯಿತು. ದಾನಿಗಳು ಕೊಡುಗೆಯಾಗಿ ನೀಡಿದ ದೊಡ್ಡ ಕಾಲುದೀಪವನ್ನು ಬೆಳಗಿಸಿ, ಶ್ರೀ ಶಾರದಾಂಬಾ ಭಜನಾ ಮಂಡಳಿಯವರು ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಮಹಾಸಭೆಯನ್ನು ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆಯವರ ಪ್ರಸ್ತಾವನೆಯೊಂದಿಗೆ ಆರಂಭಿಸಲಾಯಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ 2019–'20ರ ಆಡಳಿತ ಮಂಡಳಿಯ ವರದಿಯನ್ನು ಮಂಡಿಸಿದರೆ, ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ 2019–'20ರ ಪರಿಶೋಧಿತ ಲೆಕ್ಕಪತ್ರವನ್ನು ಮಂಡಿಸಿ ಅನುಮೋದನೆ ಪಡೆದುಕೊಂಡರು. ಸದಸ್ಯರಿಂದ ಬಂದ ಸಲಹೆ–ಸೂಚನೆಗಳನ್ನು ಪರಿಶೀಲಿಸಲು ನಿರ್ಧರಿಸ ಲಾಯಿತು. ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಧನ್ಯವಾದ ನೀಡಿದರು. ಬಳಿಕ ಶ್ರೀ ಸಭಾದಲ್ಲಿ ವಿದ್ಯಾನಿಧಿ ಯನ್ನು ಸ್ಥಾಪಿಸಿದ 7 ದಾನಿಗಳ ಭಾವಚಿತ್ರಗಳನ್ನು ಅವರ ಕುಟುಂಬಸ್ಥರು ಆರತಿ ಬೆಳಗಿ, ಪುಷ್ಪಾರ್ಚನೆ ನಡೆಸಿ ಅನಾವರಣಗೊಳಿಸಿದರು.

ಕೊರೋನಾ ಪ್ರಯುಕ್ತ ತಮ್ಮ ಮನೆಯ ದೀಪಾವಳಿ ಸಂಭ್ರಮದ ಫೋಟೊಗಳ ಸ್ಪರ್ಧೆಯನ್ನು ಶ್ರೀ ಸಭಾದ ಮಹಿಳಾ ವೇದಿಕೆಯವರು ನಡೆಸಿದ್ದು ಸುಮಾರು 19 ಜನರಿಗೆ ವಿವಿಧ ವಿಭಾಗಗಳಲ್ಲಿ ಬಹುಮಾನವನ್ನು ನೀಡಲಾಯಿತು. ಶ್ರೀಮತಿ ಸ್ನೇಹಲತಾ ದಿವಾಕರ್ ಕಾರ್ಯಕ್ರಮ ನಿರೂಪಿಸಿದರು. ಪ್ರತಿಭಾ ಪುರಸ್ಕಾರ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಸ್ಮಾರಕ ವಿದ್ಯಾನಿಧಿಗಳು :**

- ಕೆ. ಸದಾಶಿವ ಶರ್ಮ
- ಬ್ರಹ್ಮಶ್ರೀ ಡಾ. ನಂದಿಕೂರು ಹರಿಶ್ಚಂದ್ರ ಉಪಾಧ್ಯಾಯ ಮತ್ತು ಪ್ರಸನ್ನಕುಮಾರಿ ಉಪಾಧ್ಯಾಯ
- ನಂದಿಕೂರು ಸದಾಶಿವ ರಾವ್
- ನಂದಿಕೂರು ಮೋಹನ್ ರಾವ್
- ಬೊಂಡಂತಿಲ ನರಸಪ್ಪಯ್ಯ ಮತ್ತು ಪಾರ್ವತಿಯಮ್ಮ
- ನಾಗಮ್ಮ ನಾರಾಯಣ ರಾವ್ ಇನ್ನಾ
- ಇನ್ನಾ ಅಪ್ಪಾಜಿ ರಾವ್ ಮತ್ತು ಇನ್ನಾ ರಾಜಮ್ಮ

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಮಹಾಸಭೆ

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 83ನೇ ವಾರ್ಷಿಕ ಮಹಾಸಭೆಯು, ಸಂಘದ ಅಧ್ಯಕ್ಷರಾದ ಶ್ರೀ ಕರುಣ್ ರಾವ್ ಬೆಳ್ಳೆ ಇವರ ಅಧ್ಯಕ್ಷತೆಯಲ್ಲಿ ತಾ. 29–11–2020ರಂದು 'ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಭವನ'ದಲ್ಲಿ ಜರುಗಿತು.




ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯು ಆಡಳಿತ ಮಂಡಳಿಯ ವರದಿಗೆ, ಮುಂದಿನ ವರ್ಷದ ಅಂದಾಜು ಆಯ–ವ್ಯಯಕ್ಕೆ, 2019–'20ನೇ ವರ್ಷದ ಲೆಕ್ಕ ಪರಿಶೋಧನಾ ವರದಿಗೆ, 2019–'20ನೇ ಸಾಲಿನ ಲಾಭಾಂಶ ವಿಂಗಡಣೆಗೆ ಮತ್ತು ಸದಸ್ಯರಿಗೆ 12.5% ಲಾಭಾಂಶ ವಿತರಣೆಗೆ ತನ್ನ ಅನುಮೋದನೆಯನ್ನು ನೀಡಿತು.

ಸಭೆಯಲ್ಲಿ ಭಾಗವಹಿಸಿದ ಸದಸ್ಯರು, ಸಂಘದ ಅಭಿವೃದ್ಧಿಗೆ ಹಲವು ಸಲಹೆ–ಸೂಚನೆಗಳನ್ನು ನೀಡಿ, ಇವುಗಳನ್ನು ಅನುಷ್ಠಾನಗೊಳಿಸಲು ಆಡಳಿತ ಮಂಡಳಿಯನ್ನು ವಿನಂತಿಸಿದರು.

ಸದಸ್ಯರ ಸಲಹೆ–ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆಯನ್ನು ಇತ್ತು, ಕಳೆದ ಆರ್ಥಿಕ ವರ್ಷದಲ್ಲಿ ಸಂಘವು ರೂ. 174 ಕೋಟಿ ಮೀರಿ ವ್ಯವಹಾರದ ಗುರಿ ಮುಟ್ಟಲು ಸಹಕರಿಸಿದ ಎಲ್ಲಾ ಸದಸ್ಯರಿಗೆ ಕೃತಜ್ಞತೆಗಳನ್ನು ಸಮರ್ಪಿಸಿ, ಮುಂದಕ್ಕೂ ಸದಸ್ಯರ ತುಂಬುಹೃದಯದ ಸಹಕಾರವನ್ನು ಕೋರಿದರು ಹಾಗೂ 2020–'21ನೇ ಸಾಲಿಗೆ ಸಂಘವು ರೂ. 217 ಕೋಟಿ ವ್ಯವಹಾರದ ಗುರಿಯನ್ನು ಹೊಂದಿದೆ. ಸಂಘದ ನಿರ್ದೇಶಕರಾದ ಶ್ರೀ ಟಿ. ಬಿ. ಮೋಹನ್ ರಾವ್ ಇವರು ಧನ್ಯವಾದಗಳನ್ನು ಅರ್ಪಿಸಿದರು. ಬೆಳಗ್ಗೆ 11–00 ಗಂಟೆಗೆ ಪ್ರಾರಂಭವಾದ ಸಭೆಯು 1–00 ಗಂಟೆಯ ತನಕ ನಡೆದು ಮಧ್ಯಾಹ್ನದ ಭೋಜನದೊಂದಿಗೆ ಮುಕ್ತಾಯಗೊಂಡಿತು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ. ಗಣೇಶ್ ರಾವ್ ಕಾರ್ಯಕ್ರಮ ಆಯೋಜಿಸಿ, ನಿರ್ವಹಿಸಿದರು.

*ಚಿತ್ರ : ಶ್ರೀ ರಘುವೀರ್ ರಾವ್ ಪೆರ್ಡೂರ್*



'ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿದು ಬೀಳುವ ಭಯವಿರದು; ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ಹೊರತು ಕೊಂಬೆಯನ್ನಲ್ಲ'. – ಕುವೆಂಪು

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್, ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ, ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ, ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು : **ಹರ್ಷಕುಮಾರ್ ಕೇದಿಗೆ**


**ಪ್ರಕಟಣೆ**

## ವಿದ್ಯಾಭ್ಯಾಸ ಸಮಿತಿ

ದಿನಾಂಕ 24-11-2020

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡಮಾಡುತ್ತದೆ. ಪ್ರಾಥಮಿಕ ತರಗತಿಯ ವಿದ್ಯಾರ್ಥಿಗಳಿಗೆ ರೂ. 5,000/–, ಹೈಸ್ಕೂಲ್ ವಿದ್ಯಾರ್ಥಿಗಳಿಗೆ ರೂ. 10,000/– ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ರೂ. 25,000/–. ಈ ವಿದ್ಯಾರ್ಥಿ ವೇತನಕ್ಕೆ ನಮ್ಮ ಸಮಾಜದ ಎಲ್ಲಾ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕೆಂದು ನಮ್ಮ ಕಳಕಳಿಯ ವಿನಂತಿ. ಇದಕ್ಕಾಗಿ Economically Weaker Section (EWS) Certificateನ್ನು ತಾವು ತಮ್ಮ ಗ್ರಾಮಲೆಕ್ಕಿಗರಿಂದ ಪಡೆದುಕೊಳ್ಳಬೇಕು. EWS Certificate ಪಡೆಯಲು ತಾವು ಈ ಕೆಳಕಂಡ ದಾಖಲೆಗಳೊಂದಿಗೆ ಗ್ರಾಮಲೆಕ್ಕಿಗರ ಕಚೇರಿಗೆ ಹೋಗಬೇಕು.

1. ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ
2. ರೇಶನ್ ಕಾರ್ಡ್‌ನ ಜೆರಾಕ್ಸ್ ಪ್ರತಿ
3. ಸ್ಥಾನಿಕ ಬ್ರಾಹ್ಮಣ ಎಂದು ಜಾತಿ ಪ್ರಮಾಣ ಪತ್ರ
4. ಭಾವಚಿತ್ರ

EWS Certificateನೊಂದಿಗೆ ತಾವು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದು. ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು – 575 003 ಇಲ್ಲಿಗೆ ಕಳುಹಿಸಿಕೊಟ್ಟರೆ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿ ಸಂಬಂಧಪಟ್ಟವರಿಗೆ ಸಲ್ಲಿಸುವ ಪ್ರಯತ್ನವನ್ನು ಶ್ರೀ ಸುಬ್ರಹ್ಮಣ್ಯ ಸಭೆಯಿಂದ ಮಾಡಲಾಗುವುದು.

**ವಿದ್ಯಾರ್ಥಿ ವೇತನಕ್ಕೆ ಸಲ್ಲಿಸಬೇಕಾದ ಅರ್ಜಿಗೆ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ**

**ಕರುಣ್ ರಾವ್ ಬೆಳ್ಳೆ : 7337634359 ಡಾ। ಎ. ಪಿ. ಕೃಷ್ಣ : 9845213997**

## ಐಸಿರಿ

ಮೂಡಣ ಸೂರ್ಯ ಏರುತ ಬರುವ
ನಗುವನು ಚೀರುತ ಪೂರ್ವದಲಿ
ಹೊನ್ನಿನ ಬಣ್ಣವ ಭೂರಮೆಗೇರಿಸಿ
ನವಚೈತನ್ಯವನು ತುಂಬುತಲಿ.


ಸ್ವಾಗತ ತೋರಲು ಕಲಶವ ಏರಿಸಿ
ಗೆಂದಾಳಿ ತೆಂಗದು ಬಾಗುತಿದೆ
ತೇಲುತ ತೂಗುತ ಚಾಮರ ಬೀಸಲು
ಕಂಗಿನ ಮರವದು ತೂಗುತಿದೆ...

ದುಡಿಯುವ ರೈತನು ದೇವರ ನೆನೆಸುತ
ಇಳಿದಿಹ ದುಡಿಯಲು ಹೊಲದಲ್ಲಿ
ಬೆವರನು ಒರೆಸುತ ನೇಸರ ನೋಡುತ
ಕುಣಿವನು ಹಸಿರಿನ ಹೊಲದಲ್ಲಿ.

ಆಕಳ ಹಿಂಡದು ಹಾಲನು ಹೇರುತ
ಹೀರಲು ಕರುಗಳ ಕರೆಯುತಿದೆ
ಅರಳಿದ ಸುಮಗಳು ಪರಿಮಳ ಬೀರುತ
ಭೃಂಗದ ಸಂಘವ ಬಯಸುತಿವೆ.

ಬಾನಲಿ ಏರುತ ಭೂರಮೆಗೊಲಿಯುತ
ಮೋಡದ ಮರೆಯಲಿ ಅಡಗುವನು
ಚಂದಿರನಂದಕೆ ನಿಶೆಯಲಿ ಜೋಡಲು
ಪಡುವಣ ಕಡಲನು ಸೇರುವನು.

ರಚನೆ : ಉಮೇಶ್ ರಾವ್ ಕೆ. (ಉ. ರಾ. ಕೆ.)
ಮೊ. : 9819624275



“ ಸಾವಿಗೆ ನಾ ಹೆದರುವುದಿಲ್ಲ.
ಯಾಕೆಂದರೆ ನಾ ಇರೋತನಕ
ಅದು ಬರೋದಿಲ್ಲ.
ಅದು ಬಂದಾಗ ನಾ ಇರೋದಿಲ್ಲ”

– ದ. ರಾ. ಬೇಂದ್ರೆ

## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ–ಅರ್ಚಕ ಪರಿಪಾಲನಾ ಸಭಾ, ಮಂಗಳೂರು

**(ಬೈಂದೂರು ಶಾಖೆ)**

॥ ನಮಃ ಶಿವಾಯ ಸಾಂಬಾಯ ಸಗಣಾಯ ಸಸೂನವೇ ॥
**ಭಾರತೀ ಕರುಣಾಪಾತ್ರಂ ಭಾರತೀಪದಭೂಷಿತಮ್ । ಭಾರತೀಪದಮಾರೂಢಂ ಭಾರತೀತೀರ್ಥಮಾಶ್ರಯೇ ॥**
**ವಿದ್ಯಾವಿನಯಸಂಪನ್ನಂ ವೀತರಾಗಂ ವಿವೇಕಿನಮ್ । ವಂದೇ ವೇದಾಂತತತ್ವಜ್ಞಂ ವಿಧುಶೇಖರಭಾರತೀಮ್ ॥**

ಆಸ್ತಿಕ ಬಂಧುಗಳೇ,

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯೆತ್ಯಾದಿ ಸಮಸ್ತಬಿರುದಾವಳೀವಿರಾಜಮಾನರಾದ
ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ
ಹಾಗೂ ಅವರ ತತ್ಕರಕಮಲಸಂಜಾತರಾದ ಶ್ರೀ ಜಗದ್ಗುರು ಶಂಕರಾಚಾರ್ಯ
ಶ್ರೀ ವಿಧುಶೇಖರಭಾರತೀ ಸ್ವಾಮಿಗಳವರ ಪರಮಾನುಗ್ರಹಭರಿತ ಆಶೀರ್ವಾದಗಳಿಂದ

**ಸ್ವಸ್ತಿ। ಶ್ರೀ ಶಾಲಿವಾಹನಶಕ ವರ್ಷ ೧೯೪೩ನೇ ಶಾರ್ವರಿನಾಮ ಸಂವತ್ಸರದ**
**ದಿನಾಂಕ 25-12-2020, ಶುಕ್ರವಾರದ ಈ ಶುಭದಿನ ಶ್ರೀಪರಮೇಶ್ವರಾನುಗ್ರಹಪ್ರಾಪ್ತಿಪುರಸ್ಸರವಾಗಿ**
**ಸರ್ವಜನ ಕ್ಷೇಮ ಸಂಪಾದನೆಗಾಗಿ ಹೇರಂಜಾಲು ಶ್ರೀ ಗುಡೇ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ**
**(ಬೈಂದೂರು ತಾಲೂಕು ಸ್ಥಾನಿಕ ಬ್ರಾಹ್ಮಣರ ಸಹಕಾರದೊಂದಿಗೆ)**

## ಶ್ರೀ ಶಿವಪಂಚಾಕ್ಷರೀ ಯಾಗವನ್ನು

**ಸಂಪನ್ನಗೊಳಿಸಬೇಕೆಂದು ಸಂಕಲ್ಪಿಸಿದ್ದೇವೆ. ಅದಲ್ಲದೇ ತದಂಗವಾಗಿ ಧಾರ್ಮಿಕ ಸಭೆಯು ನಡೆಯಲಿದೆ.**
**ಭಕ್ತಜನರಾದ ತಾವು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ತನು–ಮನ–ಧನಗಳಿಂದ ಸಹಕರಿಸಿ,**
**ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಬಯಸುತ್ತೇವೆ.**

ವೇದಮೂರ್ತಿ ಬ್ರಹ್ಮಶ್ರೀ ಪಿ. ಭವಾನೀಶಂಕರ ಉಪಾಧ್ಯಾಯ – ಗೌರವಾಧ್ಯಕ್ಷರು
ಜಗದಭಿರಾಮಸ್ವಾಮಿ – ಉಪಾಧ್ಯಕ್ಷರು
ಗುರುಪ್ರಸಾದ ಹೆಬ್ಬಾರ್ – ಅಧ್ಯಕ್ಷರು
ಚಿದಾನಂದ ಶಾನುಭೋಗ್ – ಕಾರ್ಯದರ್ಶಿ
ಕೃಷ್ಣರಾಜ ಭಟ್ – ಜೊತೆ ಕಾರ್ಯದರ್ಶಿ
ಪ್ರತಾಪ್ ರಾವ್ – ಕೋಶಾಧಿಕಾರಿ

### ಕಾರ್ಯಕ್ರಮ

ಪ್ರಾತಃ 6-30 ಗಂಟೆಗೆ : **ದೇವತಾಪ್ರಾರ್ಥನೆ, ಪುಣ್ಯಾಹವಾಚನ**
7-00 ಗಂಟೆಗೆ : **ಹೋಮಾರಂಭ**
10-00 ಗಂಟೆಗೆ : **ಪೂರ್ಣಾಹುತಿ, ಮಂಗಳಾರತಿ**
11-00 ಗಂಟೆಗೆ : **ಸಭಾ ಕಾರ್ಯಕ್ರಮ**

ಉದ್ಘಾಟನೆ : ಶ್ರೀ ಉಮೇಶ್ ಶಾನುಭೋಗ್
ಮಾಜಿ ಧರ್ಮದರ್ಶಿಗಳು, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ, ಕಿರಿಮಂಜೇಶ್ವರ

ಉಪನ್ಯಾಸ : ವೇದಮೂರ್ತಿ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯ, ಪಾವಂಜೆ

ಉಪಸ್ಥಿತಿ : ವೇದಮೂರ್ತಿ ಬ್ರಹ್ಮಶ್ರೀ ವಾಗೀಶ ಎಸ್. ಶಾಸ್ತ್ರೀ
ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳು, ಶ್ರೀ ಶೃಂಗೇರಿ ಮಠ
ಶ್ರೀ ಪದ್ಮನಾಭ ಮೇರ್ಟ
ಧರ್ಮದರ್ಶಿಗಳು, ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನ, ಹೇರಂಜಾಲು

ಮಧ್ಯಾಹ್ನ 1–00 ಗಂಟೆಗೆ : **ಭೋಜನ ಪ್ರಸಾದ**

**ಸರ್ವರಿಗೂ ಆದರದ ಸ್ವಾಗತ.**

## ಶ್ರೀ ಸುಬ್ರಹ್ಮಣ್ಯ ಸಭಾಸದನಕ್ಕೆ ಮಹಿಳಾ ವೇದಿಕೆಯಿಂದ ದೊಡ್ಡ ಕಾಲುದೀಪ ಕೊಡುಗೆ




ಶ್ರೀ ಸುಬ್ರಹ್ಮಣ್ಯ ಸಭಾಸದನಕ್ಕೆ ಮಹಿಳಾ ವೇದಿಕೆಯಿಂದ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್, ಡಾಕ್ಟರ್ ಜಯಲಕ್ಷ್ಮಿ, ಶ್ರೀ ಭಾಗ್ಯಚಂದ್ರ ರಾವ್ ಬೆಂಗಳೂರು, ಶ್ರೀ ಶ್ರೀನಿವಾಸ್ ರಾವ್, ಶ್ರೀ ಸುಬ್ಬ ರಾವ್ ಪೊಳಲಿ, ಶ್ರೀ ದಿವಾಕರ ರಾವ್ ಇವರು ದೊಡ್ಡ ಕಾಲುದೀಪ ಕೊಡುಗೆಯಾಗಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಸಭಾದ ಅಧ್ಯಕ್ಷರು ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್, ಯುವವೇದಿಕೆ ಅಧ್ಯಕ್ಷರು ಶ್ರೀ ಮನೀಶ್ ರಾವ್ ಉಪಸ್ಥಿತರಿದ್ದರು. ***ಚಿತ್ರ : ಶ್ರೀ ರಘುವೀರ್ ರಾವ್ ಪೆರ್ಡೂರ್***

## ಶ್ರೀ ಸುಬ್ರಹ್ಮಣ್ಯ ಸಭಾ ಮಹಿಳಾ ವೇದಿಕೆಯ ವತಿಯಿಂದ ದೀಪಾವಳಿ ಪ್ರಯುಕ್ತ ಛಾಯಾಚಿತ್ರ




ಕೊರೋನ ಕಾರಣದಿಂದ ದೀಪಾವಳಿ ಆಚರಣೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದ ಸದಸ್ಯರು ವಿಶಿಷ್ಟ ರೀತಿಯಿಂದ ಅಂದರೆ ಅವರವರು ತಮ್ಮ ಮನೆಗಳಲ್ಲಿ ಆಚರಿಸಿದರ ಛಾಯಾಚಿತ್ರವನ್ನು ವಾಟ್ಸಾಪ್‌ನಲ್ಲಿ ಕಳುಹಿಸುವ ಮುಖಾಂತರ ಸ್ಪರ್ಧೆಯನ್ನು ಶ್ರೀ ಸಭಾದ ಮಹಿಳಾ ವೇದಿಕೆಯವರು ಆಯೋಜಿಸಿದ್ದರು. ಸ್ಪರ್ಧೆಯಲ್ಲಿ ನಮ್ಮ ಸದಸ್ಯರು ಉತ್ತಮ ರೀತಿಯಲ್ಲಿ ಸಹಕರಿಸಿದರು. ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದವರಿಗೆ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಹಾಗೂ ಪದಾಧಿಕಾರಿಗಳು ಬಹುಮಾನ ನೀಡಿ ಶುಭಹಾರೈಸಿದರು. ಶ್ರೀಮತಿ ವೈಜಯಂತಿಮಾಲಾ ಬೆಳ್ಳೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಕುಸುಮಾ ನವೀನ್‌ಕುಮಾರ್ ಬಹುಮಾನ ಪ್ರಾಯೋಜಿಸಿದರು. ***ಚಿತ್ರ : ಶ್ರೀ ರಘುವೀರ್ ರಾವ್ ಪೆರ್ಡೂರ್***

# ಪ್ರತಿಭಾ ಪುರಸ್ಕಾರ








ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ ವತಿಯಿಂದ ದಿನಾಂಕ 29–11–2020ನೇ ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ 36 ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಮತ್ತು ಓರ್ವ ಪಠ್ಯೇತರ ವಿಷಯಗಳಲ್ಲಿ ಪ್ರತಿಭಾವಂತೆಯನ್ನು ಶ್ರೀಮತಿ ಕೆ. ಸೌಭದ್ರಾ ಸದಾಶಿವ ಶಾಸ್ತ್ರಿಯವರು ಫಲಪುಷ್ಪ, ಸ್ಮರಣಿಕೆ ಹಾಗೂ ಆಶೀರ್ವಾದರೂಪದಲ್ಲಿ ನಗದು ನೀಡಿ ಅಭಿನಂದಿಸಿದರು. ಶ್ರೀ ಕೆ. ಸದಾಶಿವ ಶಾಸ್ತ್ರಿ ಕಾರ್ಯಕ್ರಮ ಸಂಘಟಿಸಿ, ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.


ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

Sri Hari Adyapady
Proprietor
Ph : 0824-2251597 (R)
2252716 (O)
Mobile : 9448344612

SHIVA ELECTRICALS
2nd Floor, Osman Complex, Church Building
Main Road, BAJPE, MANGALORE
We undertake all types of Electrical, Plumbing and Sanitary works



ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
: 9448043969
8861497325

ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES



ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು


*Manish Rao U.*
Tel : (O) 2223301
Mobile : 9448726499 / 8884284939

NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

Muralidhara Rao Adyapadi
Proprietor
Mob : 94480 27259
99803 16434



SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಡಾ. ಕ್ಯಾಪ್ಟನ್ ಪಿ. ಸತೀಶ್ ರಾವ್, ಬೆಂಗಳೂರು ಮತ್ತು ಶ್ರೀಮತಿ ನಯನ ದಂಪತಿಗಳ ಪುತ್ರ **ಚಿ। ಡಾ। ಆಶಿಶ್ ರಾವ್** ಹಾಗೂ ಶ್ರೀಮತಿ ಸುಮ ಮತ್ತು ಶ್ರೀ ಜಗನ್ನಾಥ್ ಅವರ ಪುತ್ರಿ **ಚಿ। ಸೌ। ಡಾ। ನಾಗಶ್ರೀ ಭಾರದ್ವಾಜ್** ಇವರ ವಿವಾಹವು ತಾ. 29–10–2020ರಂದು ಹಾಸನದ 'ಶ್ರೀ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

* * *

ಕುಲ್ಕುಂದ ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಚಿದಾನಂದ ರಾವ್ ಇವರ ಪುತ್ರಿ **ಚಿ। ಸೌ। ಶ್ರೀನಿತ್ಯ** ಮತ್ತು ತೆಂಕಿಲ ಶ್ರೀಮತಿ ಜಾನಕಿ ಮತ್ತು ಕೀರ್ತಿಶೇಷ ಬಾಲಕೃಷ್ಣ ರಾವ್ ಇವರ ಪುತ್ರ **ಚಿ। ಟಿ. ಸುದರ್ಶನ್ ರಾವ್** ಇವರ ವಿವಾಹವು ತಾ. 25–10–2020ನೇ ರವಿವಾರ ಕುಕ್ಕೆ ಸುಬ್ರಹ್ಮಣ್ಯದ ವಧುವಿನ ಮನೆ 'ಪ್ರಕಾಶ ನಿಲಯ'ದಲ್ಲಿ ನೆರವೇರಿತು.

* * *

ಮಡಿಯಾಲ ಶ್ರೀ ವಿಷ್ಣು ರಾವ್ ಮತ್ತು ಶ್ರೀಮತಿ ಅನಸೂಯರವರ ಸುಪುತ್ರ **ಚಿ। ನವನೀತ** ಮತ್ತು ಬೈಲೂರು ಶ್ರೀ ರಾಜಕುಮಾರ ಮತ್ತು ಶ್ರೀಮತಿ ಶ್ಯಾಮಲಾರವರ ಸುಪುತ್ರಿ **ಚಿ। ಸೌ। ಶ್ರುತಿ** ಇವರ ವಿವಾಹವು ತಾ. 02–12–2020ನೇ ಬುಧವಾರ ಮಂಗಳೂರು ಅಶೋಕನಗರದಲ್ಲಿರುವ 'ಗೋಕುಲ ಕಲ್ಯಾಣ ಮಂಟಪ'ದಲ್ಲಿ ನೆರವೇರಿತು.

## ಮನೆಯೇ ಮಂತ್ರಾಲಯ...

ತಾಳೆಪ್ಪಾಡಿ ಶ್ರೀಮತಿ ಮತ್ತು ಶ್ರೀ ಶಿವಶಂಕರ ರಾವ್ ಇವರು ಮಂಗಳೂರಿನ ಬಿಕರ್ನಕಟ್ಟೆಯ ದತ್ತನಗರದಲ್ಲಿ ನಿರ್ಮಿಸಿರುವ ನೂತನ ಮನೆ **'ರಾಧಾ ನಿವಾಸ'** ಇದರ ಪ್ರವೇಶೋತ್ಸವವು ತಾ. 05–12–2020ನೇ ಶನಿವಾರ ಜರುಗಿತು.


## ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂದಾಪುರ



ದಿನಾಂಕ 8–11–2020ರಂದು ರವಿವಾರ ನಡೆದ ಮಹಾಸಭೆಯ ನಿರ್ಣಯದಂತೆ ಮುಂದಿನ 3 ವರ್ಷ ಅವಧಿಗೆ ನೂತನ ಮಂಡಳಿಯನ್ನು ರಚಿಸಲಾಯಿತು.

ಅಧ್ಯಕ್ಷರು : **ಶ್ರೀ ಎಂ. ಸತ್ಯನಾರಾಯಣ ಹೆಬ್ಬಾರ್, ಮರೂರು**
ಕಾರ್ಯದರ್ಶಿ : **ಶ್ರೀ ಸುಭಾಷ್ಚಂದ್ರ ಬಳ್ಕೂರು**
ಕೋಶಾಧಿಕಾರಿ : **ಶ್ರೀ ಅರುಣ ಕುಮಾರ ಶ್ಯಾನುಭಾಗ್, ಕಿರಿಮಂಜೇಶ್ವರ**

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಮುಂಬಯಿ ಸಂಘದ ಮಾಜಿ ಅಧ್ಯಕ್ಷ, ನಟ, ನಿರ್ದೇಶಕ, ಲೇಖಕ, ಸಂಘಟಕ, ಸಮಾಜಸೇವಕ ಹಾಗೂ ಮುಂಬಯಿ ಕನ್ನಡ ಕಲಾಕೇಂದ್ರದ ಅಧ್ಯಕ್ಷ **ಬೈಲೂರು ಬಾಲಚಂದ್ರ ರಾವ್** (75) ಅವರು 18–10–2020ರಂದು ದೈವಾಧೀನರಾದರು. ಕಾರ್ಕಳ ತಾಲೂಕಿನ ಬೈಲೂರಿನ ಲಕ್ಷ್ಮೀನಾರಾಯಣ ರಾವ್ ಮತ್ತು ಜಲಜಾಕ್ಷಿ ದಂಪತಿಯ ಪುತ್ರನಾಗಿ 1945ರ ಎಪ್ರಿಲ್ 15ರಂದು ಬಾಲಚಂದ್ರ ರಾವ್ ಅವರ ಜನನ. ಮೆಕ್ಯಾನಿಕ್ ಇಂಜಿನಿಯರಿಂಗ್, ಡಿಪ್ಲೋಮಾ ಇನ್ ಬಿಸಿನೆಸ್ ಮ್ಯಾನೇಂಜ್‌ಮೆಂಟ್ ಪದವೀಧರರಾಗಿದ್ದ ಇವರು 1969ರಿಂದ 2005ರ ವರೆಗೆ 36 ವರ್ಷ ನೇವಲ್ ಡಾಕ್‌ಯಾರ್ಡ್ ಇಂಡಿಯನ್ ನೇವಿಯಲ್ಲಿ ಉದ್ಯೋಗ ಮಾಡಿ ನಿವೃತ್ತರಾಗಿದ್ದರು. ಇಂಡಿಯನ್ ನೇವಿಯಲ್ಲಿ ಇವರ ಕಾರ್ಯಸಾಧನೆಗಾಗಿ 'ಬೆಸ್ಟ್ ಆಫೀಸರ್ ಆಫ್ ದ ಇಯರ್', 'ವೆಸ್ಟರ್ನ್ ನೇವಲ್ ಕಮಾಂಡ್', 'ಇಂಡಿಯನ್ ನೇವಿ ಪೂರ್ವಸ್ಟಾರ್', 'ಪಶ್ಚಿಮಸ್ಟಾರ್' (ಯುದ್ಧ ಪದಕಗಳು) ಮುಂತಾದ ಅನೇಕ ಪ್ರಶಸ್ತಿಗಳು ಲಭಿಸಿದ್ದವು.

***



ನಾಸಿಕ್‌ನಲ್ಲಿ ನೆಲೆಸಿದ್ದ **ಶ್ರೀ ಏಳಿಂಜೆ ಶಂಕರ ರಾವ್** (76) ತಾ. 24–11–2020ನೇ ಮಂಗಳವಾರ ನಿಧನ ಹೊಂದಿದರು. ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

***



ಕಳಿಂಜ (ಧರ್ಮಸ್ಥಳ) ನಿವಾಸಿ ದಿ। ಪುಟ್ಟಣ್ಣಯ್ಯರವರ ಧರ್ಮಪತ್ನಿ **ಶ್ರೀಮತಿ ಸರೋಜಿನಿ ಅಮ್ಮ** (87) ತಾ. 24–11–2020 ಮಂಗಳವಾರ ನಿಧನ ಹೊಂದಿದ್ದು, ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

***



ಮೈಸೂರಿನಲ್ಲಿ ನೆಲೆಸಿದ್ದ **ಕೊಡಿಪ್ಪಾಡಿ ಶ್ರೀ ಆನಂದ ರಾವ್** (88)ರವರು ತಾ. 15–11–2020ನೇ ಆದಿತ್ಯವಾರ ನಿಧನ ಹೊಂದಿದ್ದು ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

***

**ಕೇಳ ಶ್ರೀ ರಾಮ ರಾವ್** (90)ರವರು ತಾ. 13–11–2020 ಶುಕ್ರವಾರ ಕಾಶಿಪಟ್ನದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಐವರು ಪುತ್ರರು, ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


**ರಾಮಾ ಅಟೋಮೊಬೈಲ್ಸ್**




ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕೈೂಲ**, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241




Prop.: *Kishore Kumar Kedige*
Ph. : 2231524
M. : 9880726325



**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*



ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
[illegible]
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
[illegible]
ಮಂಗಳೂರು - 575 002 ☎ : 9880258216

# ಸಂಸ್ಕೃತ ಪ್ರಚಾರ ಏಕೆ, ಹೇಗೆ? ಒಂದು ಚಿಂತನೆ

ಹಾಗಾಗಿ ಭಾರತಕ್ಕೊಂದು ಭಾಷೆ ಬೇಕು. ಕೇವಲ ಕರ್ನಾಟಕ, ತಮಿಳುನಾಡು, ಪಂಜಾಬ್, ಬಂಗಾಳಗಳಿಗೆ ಸೀಮಿತವಾದ, ಸೀಮಿತವಾಗುವ ಭಾಷೆಯ ಬಗೆಗೆ ನಾವು ಈಗ ಮಾತನಾಡುತ್ತಿಲ್ಲ. ಬಹುಜನರ ಭಾಷೆಯಾದ ಹಿಂದಿಯ ಬಗೆಗೂ ಹೇಳುತ್ತಿಲ್ಲ. ಇಂಗ್ಲಿಷ್ ನಮ್ಮ ದೇಶಭಾಷೆಯಾಗಿ ನಗೆಪಾಟಲಿಗೆ ವಿಶ್ವಸ್ತರದಲ್ಲಿ ಒಳಗಾಗಬೇಕಿಲ್ಲ. ಎಲ್ಲರಿಗೂ ಸಮಾನವಾದ, ಎಲ್ಲರನ್ನೂ ಒಂದೇ ಸೂತ್ರದಲ್ಲಿ ಬಂಧಿಸುವ ನಮ್ಮೆಲ್ಲರಲ್ಲೂ ಏಕರಸವಾಗಿ ಹರಿಯುತ್ತಿರುವ ಸಂಸ್ಕೃತಿಯ ಜಾಡಿನಲ್ಲಿಯೇ ಕರೆದೊಯ್ಯಲು ಶಕ್ತಿಯಿರುವ ಸಾಮರ್ಥ್ಯವಿರುವ ನಮ್ಮ ಶ್ರೇಷ್ಠ ಸಂವಿಧಾನವನ್ನು ನಿರ್ಮಾಣ ಮಾಡಿದ ಅಂಬೇಡ್ಕರ್ ಅಂತವರ ಆಶಯವಾಗಿದ್ದ ಸಂಸ್ಕೃತವನ್ನು ಆಡಳಿತದ ಭಾಷೆಯನ್ನಾಗಿಸಲು ಯಾಕೆ ನಾವು ಪ್ರಯತ್ನಿಸುತ್ತಿಲ್ಲ? ಹಿಬ್ರೂ ಭಾಷೆ ಸಾವಿರಾರು ವರುಷಗಳ ವರೆಗೆ ಅಜ್ಞಾತವಾಸ ಅನುಭವಿಸಿತ್ತು. ಇದೀಗ ಇಸ್ರೇಲಿನ ಭಾಷಾ ಸಾಮ್ರಾಜ್ಞೆಯಾಗಿದೆ. ಚೈನಾದಲ್ಲಿ ಭಾರತದಲ್ಲಿದ್ದಂತೆ ಹಲವಾರು ಭಾಷೆ, ಉಪಭಾಷೆಗಳಿದ್ದರೂ ಮಾಂಡರಿನ್ ಅವರ ಅಧಿಕೃತ ಭಾಷೆ ಮಾಡಿಕೊಂಡಿದ್ದಾರೆ. ಜಪಾನ್, ಜರ್ಮನ್, ಫ್ರಾನ್ಸ್‌ಗಳು ಇಂಗ್ಲಿಷ್‌ನತ್ತ ತಿರುಗಿಯೂ ನೋಡಿಲ್ಲ. ಆ ದೇಶಗಳ ಅಭಿವೃದ್ಧಿಯಾಗಿದೆ. ಸಂಸ್ಕೃತ ನಮ್ಮ ಎಲ್ಲ ದೇಶಭಾಷೆಗಳ ವೃದ್ಧಿಗೆ ಪೋಷಕವಾಗಿ, ಕೆಲವು ಭಾಷೆಗಳ ತಾಯಿಯಾಗಿ, ಕೆಲವಕ್ಕೆ ಮಲತಾಯಿಯಾಗಿ ಹಲವಕ್ಕೆ ಸಖಿಯಾಗಿ ಅವುಗಳನ್ನು ಉದ್ಧರಿಸಿದೆ, ಪೋಷಿಸಿದೆ... ಇಡೀ ಭಾರತೀಯ ಚೇತನವನ್ನು ಪ್ರತಿಬಿಂಬಿಸುವ ವಿಸ್ತಾರವಾದ ಸಾಂಸ್ಕೃತಿಕ ಹಿನ್ನೆಲೆಯೊಂದನ್ನು ಸಂಸ್ಕೃತವು ಕನ್ನಡ ಭಾಷೆಗೆ ಹೇಗೆಯೋ ಹಾಗೆಯೇ ಭಾರತದ ಉಳಿದೆಲ್ಲ ಭಾಷೆಗಳಿಗೂ ಕಲ್ಪಿಸಿಕೊಟ್ಟಿದೆ. ಸಾಮಾನ್ಯವಾಗಿ ನಮ್ಮ ಭಾಷಾ ಸಾಹಿತ್ಯಗಳ ಪೈಕಿ ಸಂಸ್ಕೃತದಿಂದ ಇಡಿಯಾಗಿ ಪ್ರಭಾವ ಪಡೆಯದ ಯಾವುದೇ ಒಂದು ಕಾಲವನ್ನಾಗಲೀ, ಕಾಲಘಟ್ಟವನ್ನಾಗಲೀ ಕಂಡುಕೊಳ್ಳುವುದು ಊಹಿಸಲು ಸಾಧ್ಯವೇ ಆಗುವುದಿಲ್ಲ ಎನ್ನುವಂತಿದೆ. ಸಂಸ್ಕೃತ ಭಾಷಾಸಾಹಿತ್ಯಗಳ ಸಾರವನ್ನು ಒಗ್ಗೂಡಿಸಿಕೊಂಡು ಬೇರೆ ಬೇರೆ ಭಾಷಾ ಸಾಹಿತ್ಯಗಳು ತಮ್ಮ ಭಾಷಾ ವಿಕಾಸವನ್ನು ಚಿಂತನೆಯ ಹಾದಿಯನ್ನು ಸುಗಮಗೊಳಿಸಿಕೊಂಡಿವೆ, ವಿಸ್ತಾರಗೊಳಿಸಿಕೊಂಡಿವೆ.

ಸಂಸ್ಕೃತವು ಭಾರತೀಯ ಭಾಷೆಗಳಿಗೆ ಅಪಾರವಾದ ಶಬ್ದ ಸಂಪತ್ತನ್ನು, ಸಾಹಿತ್ಯ ಸಾರಸ್ವತ ಲೋಕದಗ್ರಂಥ ಸಂಪತ್ತಿಯನ್ನು ಉದಾರವಾಗಿ ಶಕ್ತಿಯುತವಾಗಿ ದೇಣಿಗೆಯಾಗಿ ನೀಡಿದೆ. ಭಾರತೀಯರೆಲ್ಲರ ಧರ್ಮ ಮತ್ತು ಸಾರಸರ್ವಸ್ವ ಸಂಸ್ಕೃತಮಯವಾಗಿದೆ. ಅವರೆಲ್ಲರ ಮುಖವಾಣಿಯೂ ಆಗಿದೆ. ಶೃತಿ ಸ್ಮೃತಿ, ಪುರಾಣಾಗಮ, ಇತಿಹಾಸ, ಶಾಸ್ತ್ರ, ಕಾವ್ಯಗಳಿಂದ ತುಂಬಿರುವ ಸಂಸ್ಕೃತದ ಅಕ್ಷಯಪಾತ್ರೆಯಿಂದ ನಾಡಿನ ಸಮಸ್ತ ಭಾಷಾ ಸಾಹಿತ್ಯಗಳು ವಸ್ತುವನ್ನು ಪಡೆದು ಮೈದುಂಬಿ ನಿಂತಿವೆ. ಸಂಸ್ಕೃತದ ಪ್ರಯೋಜನವನ್ನು ಕವಿ, ಸಾಹಿತಿಗಳು ಬಳಸಿಕೊಳ್ಳುತ್ತಲೇ ಮುಂದುವರಿದಿದ್ದಾರೆ.

ಭಾರತೀಯ ಭಾಷೆಗಳು ಪ್ರಬಲವಾಗುವುದಕ್ಕೆ ಸಂಸ್ಕೃತವೇ ಆಧಾರಸ್ಥಂಭವಾಗಿದೆ. ಬೇರೆ ಬೇರೆ ಭಾಷೆಗಳು ಪುಷ್ಟಿಯಾಗುವುದಕ್ಕೆ ಅವುಗಳ ಜ್ಞಾನ ಭಂಡಾರವನ್ನು ಹೆಚ್ಚಿಸುವುದಕ್ಕೆ ಸಂಸ್ಕೃತದಿಂದ ಹೊರಲಾರದಷ್ಟು ಸರಕನ್ನು ಪಡೆದಿವೆ. ಹೊಸ ಚೈತನ್ಯ ಪಡೆದಿವೆ. ಹೀಗೆ ಈ ಎಲ್ಲ ಭಾರತೀಯ ಭಾಷೆಗಳಿಗೆ ಸಂಸ್ಕೃತವೇ ಪ್ರೇರಕ, ಪೋಷಕ, ಗುರು. ಈ ಭಾಷೆಗಳ ಬೇರಿಗೆ ಸಂಸ್ಕೃತದ ನೀರು ಬಿದ್ದು ಒಂದು ವಿಶಿಷ್ಟವಾದ ಭಾರತೀಯ ಸಂಸ್ಕೃತಿಯ ವೃಕ್ಷ ಕೊಂಬೆ–ರೆಂಬೆಗಳೊಂದಿಗೆ ಮೇಲೆದ್ದು ಬೆಳೆಯಿತು. ಸಂಸ್ಕೃತವು ಬೇರೆ ಬೇರೆ ಭಾಷೆಗಳ ಶೈಲಿಯ ಮೇಲೆ ಅವುಗಳ ಸಾಹಿತ್ಯದ ರೀತಿಯ ಮೇಲೆ ಪ್ರಭಾವ ಬೀರಿದೆ. ಬೇರೆ ಬೇರೆ ಭಾಷಾಂತರ, ರೂಪಾಂತರ ಅನುವಾದಗಳನ್ನು ಪಡೆದು ಈ ಭಾಷೆಗಳ ಸಂಸ್ಕೃತಿ ವೃಕ್ಷ ಫಲಪುಷ್ಪಗಳಿಂದ ಹೊಮ್ಮಿ ಕಂಗೊಳಿಸುವಂತಾಗಿದೆ. ಸಂಸ್ಕೃತದಿಂದ ಪಡೆದ ನೆರವು ಕೆಲವು ಭಾಷೆಗಳಲ್ಲಿನ ಪದಭಂಡಾರದಲ್ಲಿ ಸೇರಿಹೋಗಿದೆ. ಕೆಲವು ಭಾಷೆಗಳಿಗೆ ಅಲ್ಲಿನ ಪದಸಂಪತ್ತು ಶೇಕಡಾ 60–65ರಷ್ಟು ಸಂಸ್ಕೃತಮಯವೇ ಆಗಿಬಿಟ್ಟಿದೆ. ಕನ್ನಡ, ಮಲಯಾಳಂ, ತೆಲುಗು, ಹಿಂದಿ ಮುಂತಾದ ಭಾಷೆಗಳು ಸಂಸ್ಕೃತ ಪದಗಳಿಂದಲೇ ತುಂಬಿವೆ.


ಸಂಸ್ಕೃತ ಭರತಖಂಡದ ಆಸ್ತಿಯಾಗಿದೆ. ನಮ್ಮೆಲ್ಲರ ಆತ್ಮವನ್ನು ಕಾಪಾಡಿದೆ. ಭಾರತೀಯರೆಲ್ಲರ ಆತ್ಮಾಭಿವ್ಯಕ್ತಿಗೆ ಸಾಕ್ಷಾತ್ಕಾರಕ್ಕೆ ಸಾಧನವಾಗಿದೆ ಸಂಸ್ಕೃತ ಸಾಹಿತ್ಯದ ವಿಸ್ತಾರ ವೈವಿಧ್ಯಗಳಿಗೆ ವಿಸ್ಮಿತನಾದ ಮಾನಿಯರ್ ವಿಲಿಯಮ್ಸ್ ಎಂಬವನು ಕ್ರಿಶ್ಚಿಯನ್ ಮತವನ್ನು ಭಾರತದಲ್ಲಿ ಹರಡಲು ನಿಯುಕ್ತನಾದ ಪಂಡಿತ ಹೇಳುತ್ತಾನೆ. We are appalled by the length of India's literary production as compared with those of European Countries. Homers Illiad of 12000 lines and the Odessey of 15000 whereas the Sanskritic Epic Mahabharata contains 200000 lines without reckoning the supplement called Harivamsha. In some subjects too, especially in poetical descriptions of nature and domestic affection Indian works do not suffer by a comparison with the best specimen of Greece and Rome and while in wisdom, depth, shrewdness of their moral aphorisms they are unrivalled.

ಯುರೋಪಿನ ದೇಶಗಳು ನಿದ್ರೆಯಿಂದೇಳುವ ಮುನ್ನವೇ ಹಿಂದೂಗಳು ಅಂಕಗಣಿತದಲ್ಲಿ, ಜೀವಶಾಸ್ತ್ರ ಹಾಗೂ ವೈದ್ಯಕೀಯ ಶಾಸ್ತ್ರದಲ್ಲಿ, ವ್ಯಾಕರಣದಲ್ಲಿ ಅದ್ಭುತವಾದ ಪ್ರಗತಿಯನ್ನು ಸಾಧಿಸಿದ್ದು ಇವೆಲ್ಲವೂ ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಇದರಲ್ಲೆಲ್ಲ ಸಂಸ್ಕೃತವೇ ಉಸಿರಾಡುತ್ತಿದೆ.

ಇಂಗ್ಲಿಷ್‌ನ ಭಾಷಾ ವ್ಯಾಮೋಹದಿಂದಲೂ ಸಂಸ್ಕೃತಾಭ್ಯಾಸ ನಿಷ್ಪ್ರಯೋಜಕ ಎಂಬ ಭಾವನೆಯು ಬೆಳೆದಿದೆ.

ಯೂನಿವರ್ಸಿಟಿಯಲ್ಲಿ ತಯಾರಾಗುವ ಸಂಸ್ಕೃತ ಪಾಂಡಿತ್ಯ ತುಂಬ ಬಡಕಲೂ ಆಗಿದೆ. ಪೂರ್ವರೀತಿಯ ಪಾಂಡಿತ್ಯವಿಲ್ಲದೆ ಕಾಲೇಜಿನಲ್ಲಿ ಅಷ್ಟಿಷ್ಟು ಓದಿಕೊಳ್ಳುವುದರಿಂದ ಪ್ರಮಾಣವತ್ತಾದ ಸ್ಪಷ್ಟವಾದ ಪಾಂಡಿತ್ಯ ದುರ್ಲಭ.

**ಎಂ. ಆರ್. ವಾಸುದೇವ,** ಅಧ್ಯಕ್ಷರು, 'ಸಂಸ್ಕೃತ ಭಾರತಿ', ಮಂಗಳೂರು



PRAMOD
AUTOMOBILES
KARANGALPADY
MANGALORE - 575 003
Ph. : 2493833 (O) 2212723 (R) M. : 9448260225
Wholesale & Retail Dealers in 2 & 3 WHEELERS SPARES & ACCESSORIES
Prop. : Ln. K. HARSHA KUMAR

RAJESH
POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA

Prop. : P. Srikanth Rao
Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4


Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–

ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ಧೃತಿ ಮತ್ತು ಧ್ರುವ್

Phone : 0824-2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಭಜನಾ ಕಾರ್ಯಕ್ರಮ




ಶ್ರೀ ಸುಬ್ರಹ್ಮಣ್ಯ ಸಭಾದ 'ಮಹಾಸಭೆ'ಯಂದು ಸದನದ ಶ್ರೀ ಶಾರದಾಂಬಾ ಭಜನಾ ಮಂಡಳಿಯ ಗುರುಗಳಾದ ಶ್ರೀಯುತ ಸುಬ್ಬ ರಾವ್ ಪೊಳಲಿ ಮತ್ತು ಗಣ್ಯರು ದೀಪ ಬೆಳಗಿಸಿ ಬಳಿಕ ಭಜನಾ ತಂಡದ ಸದಸ್ಯರೊಂದಿಗೆ ಸುಮಾರು ಒಂದು ಗಂಟೆಯ ಕಾಲ ಭಜನಾ ಕಾರ್ಯಕ್ರಮವನ್ನು ನಡೆಸಿದರು. ***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

## ಉಚಿತ ನೋಟ್‌ಪುಸ್ತಕ ವಿತರಣೆ




ದಿನಾಂಕ 02–10–2020ರಂದು ಗಾಂಧೀ ಜಯಂತಿ ಲಾಲ್ ಬಹಾದ್ದೂರ್ ಶಾಸ್ತ್ರಿ ಹಾಗೂ ತಮ್ಮ ಪತಿ ಶ್ರೀ ಶ್ರೀನಿವಾಸ ರಾವ್‌ರವರ ಹುಟ್ಟಿದ ಹಬ್ಬದ ಪ್ರಯುಕ್ತ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ದಂಪತಿಗಳು ತಾನು ಶಿಕ್ಷಕಿಯಾಗಿ ದೀರ್ಘ ಸೇವೆ ಸಲ್ಲಿಸಿದ ನೆನಪಿಗೆ ಸರಕಾರಿ (ಫಿಶರೀಸ್) ಹಿರಿಯ ಪ್ರಾ. ಶಾಲೆಯ (ಚಿತ್ರಾಪುರ) ಎಲ್ಲಾ ಮಕ್ಕಳಿಗೆ ಸುಮಾರು ಸತತ 5 ವರ್ಷಗಳಿಂದ ಉಚಿತ ನೋಟ್‌ಪುಸ್ತಕಗಳನ್ನು ನೀಡುತ್ತಿದ್ದು ಈ ಬಾರಿ ರೂ. 10,000/– ಮೌಲ್ಯದ ನೋಟ್‌ಪುಸ್ತಕಗಳನ್ನು ಕೊರೋನಾ ಕಾರಣದಿಂದ ಸಾಂಕೇತಿಕವಾಗಿ ವಿತರಿಸಿದರು.

ಈ ಸರಳವಾದ ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿಯವರು, ಶಾಲಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲರು, ಮೊಗವೀರ ಸಭಾದ ಉಪಾಧ್ಯಕ್ಷರು ಹಾಗೂ ಪಣಂಬೂರು ಲಯನ್ಸ್ ಕ್ಲಬ್ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು.


### ವಧು ಬೇಕಾಗಿದೆ

ಲೆಕ್ಚರರ್, 45 ವರ್ಷ, ಸ್ವಂತ ಮನೆ, ಅವಿವಾಹಿತ, 5'–6" ಎತ್ತರ ಬ್ರಾಹ್ಮಣ (ಸ್ಥಾನಿಕ) ವರನಿಗೆ, 35ರಿಂದ 40 ವರ್ಷದೊಳಗಿನ ಯಾವುದೇ ಬ್ರಾಹ್ಮಣ ಅಥವಾ ಲಿಂಗಾಯತ ಸಸ್ಯಾಹಾರಿ ವಧು ಬೇಕಾಗಿದೆ. ವಿಚ್ಛೇದಿತ ಅಥವಾ ವಿಧವೆಯರೂ ಸಂಪರ್ಕಿಸಬಹುದು. ಮೊಬೈಲ್ : 9483928030

**PRAVEEN KUMAR ADYAPADY**
**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes : Civil, Criminal, Motor Vehicles, A.C., D.C. Cases, Land Conversion, Registration etc.**






### ಶ್ರೀ ಕ್ಷೇತ್ರ ಉದಯಾದ್ರಿ
## ಶ್ರೀ ಬಾಲಕೃಷ್ಣ ಪ್ರಸನ್ನ ಪಾರ್ವತಿ ದೇವಸ್ಥಾನ
**ಪಡುಬಿದ್ರಿ, ಉಡುಪಿ ಜಿಲ್ಲೆ - 574 111**

ಭಕ್ತಾಭಿಮಾನಿಗಳೇ,

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರರಾದ
ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ
ಹಾಗೂ ತತ್ಕರಕಮಲಸಂಜಾತರಾದ
ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

**ಸ್ವಸ್ತಿ। ಶ್ರೀ ಶಾರ್ವರಿ ನಾಮ ಸಂವತ್ಸರದ ಧನುರ್ಮಾಸ**
**ದಿನಾಂಕ 30–12–2020ರಿಂದ ದಿನಾಂಕ 13–01–2021ರ ವರೆಗೆ**
**ಪ್ರತಿ ದಿನ ರಾತ್ರಿ ಗಂಟೆ 7–30ಕ್ಕೆ**

## ಸಾಮೂಹಿಕ ರಂಗಪೂಜಾ ಸೇವೆ

**ಮತ್ತು ದಿನಾಂಕ 13-01-2021ನೇ ಬುಧವಾರದಂದು**


**ಎಳ್ಳಮಾವಾಸ್ಯೆ ಉತ್ಸವವು** ಜರಗಲಿರುವುದು.

**ಶ್ರೀ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.**

**ಜಗದಭಿರಾಮ ಸ್ವಾಮಿ** — ಪ್ರಧಾನ ಅರ್ಚಕರು
**ಪಿ. ರಘುವೀರ ರಾವ್** — ಅಧ್ಯಕ್ಷರು
**ಕರುಣಾಕರ್ ಬೆಳ್ಳೆ** — ಗೌರವ ಅಧ್ಯಕ್ಷರು
**ಶ್ರೀನಿವಾಸ ಶರ್ಮ, ಪಾದೆಬೆಟ್ಟು** — ಕಾರ್ಯದರ್ಶಿ
**ಪಿ. ಡಿ. ಶೇಖರ ರಾವ್** — ಖಜಾಂಚಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.)**
**ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು**


## ಕಡಿಯಾಳಿ ಶ್ರೀ ಮಹಿಷಮರ್ದಿನಿ ದೇವಸ್ಥಾನದ ಟ್ರಸ್ಟಿಯಾಗಿ ಕಬ್ಬಿನಾಲೆ ಶ್ರೀ ಮಂಜುನಾಥ್ ಹೆಬ್ಬಾರ್ ಆಯ್ಕೆ



ಸಮಾಜಸೇವಾ ಧುರೀಣ, ಸಭ್ಯ ವ್ಯವಹಾರಸ್ಥ, ಶ್ರಮಜೀವಿ, ಪರೋಪಕಾರಿ ನಮ್ಮ ಉಡುಪಿಯ ಹೆಬ್ಬಾರ್ ಎಂದೇ ಖ್ಯಾತಿಯ ಕಬ್ಬಿನಾಲೆ ಶ್ರೀ ಮಂಜುನಾಥ್ ಹೆಬ್ಬಾರ್ ಇವರನ್ನು ಇತ್ತೀಚಿಗೆ ಕರ್ನಾಟಕ ರಾಜ್ಯ ಸರಕಾರದ ಮುಜರಾಯಿ ಇಲಾಖೆಯು ಗುರುತಿಸಿ ಉಡುಪಿಯ ಕಡಿಯಾಳಿ ಶ್ರೀ ಮಹಿಷಮರ್ದಿನಿ ದೇವಸ್ಥಾನದ ಆಡಳಿತ ಮಂಡಳಿಯ ಟ್ರಸ್ಟಿಯಾಗಿ ಆಯ್ಕೆ ಮಾಡಿದೆ. ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ ಇದರ ಪ್ರಸ್ತುತ ಸಾಲಿನ ಅಧ್ಯಕ್ಷರಾಗಿಯೂ ಮಾನ್ಯ ಹೆಬ್ಬಾರ್ ಅವರು ಅನೇಕ ಉತ್ತಮ ಕೆಲಸ ಕಾರ್ಯಗಳನ್ನು ಮಾಡಿ ಸಮಾಜಕ್ಕೆ ಆದರ್ಶರಾಗಿದ್ದಾರೆ. ತನ್ನ ಬಿಡುವಿಲ್ಲದ ಉದ್ಯಮದ ಮಧ್ಯೆ ರಾಷ್ಟ್ರೀಯ ಸ್ವಯಂಸೇವಾ ಸಂಘ (ಆರ್.ಎಸ್.ಎಸ್.) ಇದರಲ್ಲೂ ಸಕ್ರಿಯ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ಹೀಗೆ ಹತ್ತು ಹಲವು ಕಾರ್ಯಬಾಹುಳ್ಯದ ಮಧ್ಯ ಅನೇಕ ಸಮಾಜಸೇವೆ, ಜನಹಿತಕಾರಿ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡ ಸಜ್ಜನ, ನಿಗರ್ವಿ ಶ್ರೀ ಮಂಜುನಾಥ ಹೆಬ್ಬಾರ್ ಇವರನ್ನು ಇತ್ತೀಚೆಗೆ ತನ್ನ ಹುಟ್ಟೂರಲ್ಲಿ ನಮ್ಮ ಸಮಾಜದ ಕಬ್ಬಿನಾಲೆ ಬಂಧುಗಳು ಸಂಮಾನಿಸಿದರು. ಕಬ್ಬಿನಾಲೆ ಒಂದು ಕುಗ್ರಾಮವಾದರೂ ನಮ್ಮ ಸಮಾಜದ ಅನೇಕ ಬಂಧುಗಳು ಹಲವಾರು ವರ್ಷಗಳಿಂದ ಅಲ್ಲಿ ಉತ್ತಮ ಜೀವನಾಭಿವೃದ್ಧಿಯನ್ನು ಹೊಂದಿದ್ದಾರೆ. ಇಲ್ಲಿ ನಮ್ಮವರ ಒಂದು ಸಂಘಟನೆ ಅಗತ್ಯವಾಗಿ ಬೇಕು. ಇದರಿಂದ ನಮ್ಮವರ ಶ್ರೇಯೋಭಿವೃದ್ಧಿ ಖಂಡಿತವಾಗಿ ಮುಂದೆ ನಡೆದು ನಾವೆಲ್ಲ ಒಗ್ಗಟ್ಟಾಗಿ ಬಾಳುವಂತೆ ಆಗಬೇಕು. ಜೊತೆಗೆ ಮಹಾಮಂಡಲದ ಸದಸ್ಯತ್ವವನ್ನೂ ಹೊಂದಿ ಮಹಾಮಂಡಲ ತನ್ನ 16ನೇ ಸಂಘವಾಗಿ ಕಬ್ಬಿನಾಲೆಯನ್ನು ಸೇರಿಸಿಕೊಳ್ಳಬೇಕು ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಕಬ್ಬಿನಾಲೆ ಶ್ರೀ ಮಂಜುನಾಥ್ ಹೆಬ್ಬಾರ್ ಅವರ ಧರ್ಮಪತ್ನಿಯಾದ ಶ್ರೀಮತಿ ರಜನಿ ಹೆಬ್ಬಾರ್ ಅವರು ರಾಜಕೀಯ ವಲಯದಲ್ಲಿ ಪ್ರಭಾವೀ ಮಹಿಳೆಯಾಗಿದ್ದಾರೆ. ಉಡುಪಿಯ ನಗರಸಭಾ ಸದಸ್ಯರಾಗಿದ್ದು ಒಳಕಾಡು ವಾರ್ಡ್‌ನಲ್ಲಿ ಉತ್ತಮ ಜನಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡ ಶ್ರೇಷ್ಠ ಮಹಿಳೆ ಎಂಬ ನೆಗಳ್ತೆಗೆ ಪಾತ್ರರಾಗಿದ್ದಾರೆ. ಅಲ್ಲದೆ ನಮ್ಮ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಸಮಾಜದ ಓರ್ವ ಸಕ್ರಿಯ ಕಾರ್ಯಕರ್ತೆಯಾಗಿದ್ದು ಅನೇಕರಿಗೆ ಮಾರ್ಗದರ್ಶಕರಾಗಿರುತ್ತಾರೆ. ಇದರಿಂದ ನಮ್ಮ ಸಮಾಜ ಹಾಗೂ ಇತರ ಸಮಾಜಕ್ಕೂ ಗೌರವ ಪಾತ್ರರಾಗಿದ್ದಾರೆ. ಇವರಂತೆಯೇ ಸಮಾಜದ ಪ್ರತಿಯೊಬ್ಬರೂ ತಮ್ಮ ತಮ್ಮ ವ್ಯವಹಾರ ಕ್ಷೇತ್ರದಲ್ಲಿ ಔನ್ನತ್ಯವನ್ನು ಪಡೆದು ಸಿದ್ಧಿಪ್ರಸಿದ್ಧಿಯನ್ನು ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ವರದಿ : **ಎಂ. ದೇವಾನಂದ ಭಟ್ ಬೆಳುವಾಯಿ,** ಕಾರ್ಯದರ್ಶಿ
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು ✆ : 9845644556

# ದೃಶ್ಯ ಕಾವ್ಯ ಬಿಡುಗಡೆ



ದಿವಂಗತ ಬಿ. ಯನ್. ಗೋಪಾಲಕೃಷ್ಣ ರಾವ್ ವಿರಚಿತ "ನಲ್ಲೆಗೆ" ಎಂಬ ಕವನಸಂಕಲನದಿಂದ ಆರಿಸಿದ ನಾಲ್ಕು ಹಾಡುಗಳನ್ನು ಅವರ ಮೊಮ್ಮಕ್ಕಳಾದ ಉದಯ ಟಿವಿಯ 'ಆಕೃತಿ' ಧಾರವಾಹಿಯ ನಾಯಕಿ ನಟಿ ತನ್ವಿರಾವ್ ಹಾಗೂ ಪ್ರಿಯಂಜಲಿ ರಾವ್, ಅನುಷಾ ಹಾಗೆಯೇ ಅವರ ಮಗಳಾದ ರೂಪಲಕ್ಷ್ಮೀ ರಾವ್ ಅಭಿನಯಿಸಿದ ದೃಶ್ಯ ಕಾವ್ಯವು ಅವರ ಸವಿನೆನಪಿಗಾಗಿ ನಿರ್ಮಾಣಗೊಂಡಿತ್ತು. ಈ ದೃಶ್ಯಕಾವ್ಯದ ನಿರ್ಮಾಣದ ಜವಾಬ್ದಾರಿಯನ್ನು ಶ್ರೀಮತಿ ರೂಪಲಕ್ಷ್ಮೀ ರಾವ್ ಅವರು ವಹಿಸಿಕೊಂಡಿದ್ದರು. ಶ್ರೀ ಶರತ್ ಬಿಳಿನೆಲೆ ಮತ್ತು ಶ್ರೀ ಜಗದೀಶ್ ಶಿವಪುರ ಇವರ ಸಂಗೀತದೊಂದಿಗೆ ಅನುರಾಧ ಭಟ್, ಅಜಯ್ ವಾರಿಯರ್, ರಮೇಶ್ಚಂದ್ರ ಹಾಗೂ ರೂಪಲಕ್ಷ್ಮೀ ರಾವ್ ಹಾಡಿರುತ್ತಾರೆ. ಈ ದೃಶ್ಯಕಾವ್ಯಗಳಲ್ಲಿ ಒಂದಾದ ತನ್ವಿ ರಾವ್ ಅಭಿನಯಿಸಿದ ಕೊಳಲ ಕೃಷ್ಣ ಎಂಬ ಹಾಡು ದಿನಾಂಕ 22–11–2020ರಂದು ಸಾಯಂಕಾಲ ಮಂಗಳೂರಿನ ರೂಪಲಕ್ಷ್ಮಿ ರಾವ್ ಅವರ ಸ್ವಗೃಹದಲ್ಲಿ 'ಅನುಷಾ ಅನುರಾಗ' ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಲೋಕಾರ್ಪಣೆಗೊಂಡಿತು. ಉಳಿದ ಮೂರು ಹಾಡುಗಳು ಕೂಡ ಒಂದೊಂದರಂತೆ ಮುಂದಿನ ದಿನಗಳಲ್ಲಿ ಬಿಡುಗಡೆಗೊಳ್ಳಲಿದೆ. ಈ ಸುಂದರ ಕಾರ್ಯಕ್ರಮವು ಶ್ರೀರಂಗ ಐತಾಳ್ ಇವರ ದೀಪಪ್ರಜ್ವಲನೆಯೊಂದಿಗೆ ಆರಂಭಗೊಂಡಿತು. ಮುಖ್ಯ ಅತಿಥಿಗಳಾಗಿ ತುಳು ಚಲನಚಿತ್ರ ನಿರ್ಮಾಪಕ ನಿರ್ದೇಶಕ ಹಾಗೂ ರಂಗಕರ್ಮಿ ಶ್ರೀ ವಿಜಯಕುಮಾರ್ ಕೊಡಿಯಾಲ್‌ಬೈಲು, ಡಾಕ್ಟರ್ ಕೆ. ಶಿವಣ್ಣ, ಮುಖ್ಯ ಪಶು ವೈದ್ಯಾಧಿಕಾರಿಗಳು, ವಾಮಂಜೂರು, ವಿದುಷಿ ಶ್ರೀಮತಿ ಗೀತಾ ಸರಳಾಯ, ನೃತ್ಯ ಭಾರತಿ ಕದ್ರಿ, ಶ್ರೀಮತಿ ರಶ್ಮಿ ಚಿದಾನಂದ, ನೃತ್ಯ ಭಾರತಿ ಕದ್ರಿ, ಶ್ರೀಮತಿ ಶಾರದಾ ಮಣಿ ಶೇಖರ್ ಹಾಗೂ ಶ್ರೀ ಚಂದ್ರಶೇಖರ್ ಶೆಟ್ಟಿ, ಸನಾತನ ನೃತ್ಯಾಲಯ, ಬಳ್ಳಾಲ್ ಭಾಗ್, ಮಂಗಳೂರು ಮುಂತಾದ ಗಣ್ಯರು ಉಪಸ್ಥಿತರಿದ್ದರು. ಸಂಗೀತ ನಿರ್ದೇಶಕ ಹಾಗೂ ಆಕಾಶವಾಣಿ ಕಲಾವಿದ ವಸಂತ ಕದ್ರಿ ಮತ್ತು ಸಂಗೀತ ನಿರ್ದೇಶಕ ಗಾಯಕ ಜೂನಿಯರ್ ರಾಜಕುಮಾರ್ ಎಂದೇ ಪ್ರಖ್ಯಾತಿಗೊಂಡ ಶ್ರೀ ಜಗದೀಶ ಶಿವಪುರ ಇವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಶ್ರೀಯುತ ಹರಿಪ್ರಸಾದ್ ರಾವ್ ಇವರ ಸಹಕಾರದೊಂದಿಗೆ ಶ್ರೀಮತಿ ಸಂಗೀತ ರಾವ್ ಇವರ ನಿರೂಪಣೆಯೊಂದಿಗೆ ಕಾರ್ಯಕ್ರಮವು ನಡೆಯಿತು.

## ಸಂಕಲ್ಪವನ್ನೇಕೆ ಮಾಡಬೇಕು ?

ನಾವು ಯಾವುದೇ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಬೇಕಾದರೆ ಪೂರ್ವ ಯೋಜನೆ ಅಗತ್ಯ. ಪೂರ್ವ ಯೋಜನೆ ಹಾಕಿಕೊಂಡು ಮಾಡುವ ಎಲ್ಲ ಕಾರ್ಯಗಳು ಉತ್ತಮ ಫಲದಾಯಕವಾಗಿರುತ್ತದೆ.

ಅದೇ ರೀತಿ ಯಾವುದೇ ಪೂಜಾ ಕೈಂಕರ್ಯಗಳಲ್ಲಿ ಮೊದಲು ಪೂರ್ವ ಯೋಜನೆ ಮಾಡಿಕೊಳ್ಳುವ ಸಲುವಾಗಿ ಸಂಕಲ್ಪವನ್ನು ಮಾಡಿಕೊಳ್ಳುತ್ತೇವೆ. ಸಂಕಲ್ಪದಲ್ಲಿ ನಾವು ವಾಸಿಸುತ್ತಿರುವ ಸ್ಥಳದ ಪರಿಚಯ, ಈಗಿನ ಕಾಲಮಾನ, ಯಾವ ಉದ್ದೇಶದಿಂದ ಏನು ಮಾಡುತ್ತಿದ್ದೇವೆ? ಯಾರನ್ನು ಉದ್ದೇಶಿಸಿ ಮಾಡುತ್ತಿದ್ದೇವೆ? ಇವೆಲ್ಲದರ ಸಂಕ್ಷಿಪ್ತವಾದ ವಿವರಣೆ ಇರುತ್ತದೆ.

ಇದರಿಂದ ಕಾರ್ಯಕ್ರಮದ ಯಾವ ಘಟ್ಟವನ್ನೂ ಮರೆಯುವ ಸಾಧ್ಯತೆ ಇರುವುದಿಲ್ಲ. ಆದ್ದರಿಂದ ಸಂಕಲ್ಪ ಮಾಡುವುದರಲ್ಲಿ ಯಾವುದೇ ಕಂದಾಚಾರ ಇಲ್ಲವೆಂಬುದು ಸಾಬೀತು ಆಗುತ್ತದೆ. ಪೂರ್ವ ಯೋಜನೆ ಹಾಕಿಕೊಂಡು ಮಾಡುವ ಎಲ್ಲ ಕಾರ್ಯಗಳು ಉತ್ತಮ ರೀತಿಯಿಂದ ದೈವಕೃಪೆಗೆ ಪಾತ್ರವಾಗಿ ಯಶಸ್ಸಿನ ಮೆಟ್ಟಿಲಿಗೆ ಸೋಪಾನವಾಗುತ್ತವೆ. ಸಂಕಲ್ಪದಿಂದ ಸರ್ವಸಂಕಷ್ಟ ನಿವಾರಣೆ ಸಾಧ್ಯ. ಸಂಕಲ್ಪದಲ್ಲಿ ದೃಢತೆ ಇರಲಿ, ಇದರಿಂದ ನಿಮ್ಮಲ್ಲಿರುವ ದೃಢಸಂಕಲ್ಪ ನಿಮ್ಮನ್ನು ಉತ್ತುಂಗಕ್ಕೆ ಏರಿಸುತ್ತದೆ. ಸಂಕಷ್ಟಹರಣಕ್ಕೆ ಸಂಕಲ್ಪವೇ ಅಗತ್ಯ.

*ಲೇಖನ : ಹನುಮಂತ ಮ. ಕುಲಕರ್ಣಿ  ಕೃಪೆ : 'ಶ್ರೀ ಶಂಕರ ಕೃಪಾ'*

# ಕಟಾಕ್ಷ ಕ್ಷೇತ್ರದ 'ಬಬಿಯ' ಮತ್ತವನ ಸುತ್ತಲಿನ ಅಂತೆ–ಕಂತೆಗಳ ಕುರಿತಂತೆ...

ಎರಡು ವರ್ಷ ನನ್ನ ಹಿರಿಕರು ಊರಲ್ಲಿ ಇಲ್ಲದ ವೇಳೆಯಲ್ಲಿ ಕರೆದಾಗ ಮೊಸಳೆ ಬರುತ್ತದೆನ್ನುವುದನ್ನು ಅರಿತುಕೊಂಡಿದ್ದ 'ಮಿಲಿಟರಿ ಅಧಿಕಾರಿ'ಯು ಬಬಿಯನನ್ನು ಕೂಗಿದ್ದೇ ಅದು ರುಮ್ಮನೆಂದು ಬರಲು ಗುಂಡಿನಿಂದ ಹೊಡೆದು ಕೊಂದು ಶಿಕಾರಿಯ ಮಜಾವನ್ನು ಅನುಭವಿಸಿದ್ದ. ಮುಂದೆ ಆತ ಐವತ್ತು ಹೆಜ್ಜೆಯನ್ನಿಡುವಷ್ಟರಲ್ಲಿ ಅಲ್ಲೇ ಇದ್ದ ಅಶ್ವತ್ಥಮರದಿಂದ ವಿಷಜಂತುವೊಂದು ಇಳಿದು ಬಂದು ಆ ಅಧಿಕಾರಿಯನ್ನು ಕಚ್ಚಲು, ವಿಷವೇರಿ ಆತ ಅಸುನೀಗಿದ ಎನ್ನುವುದು ಕಟ್ಟುಕತೆಯಲ್ಲ. ಮೌಖಿಕವಾಗಿ ಕೇಳಿ ತಿಳಿದುಕೊಂಡ ನಿಜದ ವಿಷಯವಷ್ಟೇ. ಅಂದು ಹಾಗೆ ತನ್ನ ಜೀವವನ್ನು ಕಳೆದುಕೊಂಡ 'ಬಬಿಯ–1'ರ ಅನಂತರ ಕಾಣಿಸಿಕೊಂಡದ್ದು ಈಗಿರುವ 'ಬಬಿಯ–2'.

ಹೇಗೆ? ಎಲ್ಲಿಂದ? ಯಾವಾಗ ಬಂದ? ಎನ್ನುವ ಸಣ್ಣ ಕುರುಹೂ ಇಲ್ಲದೆ ನನ್ನೂರಿನ ಗೌರವ, ಅಭಿಮಾನವಾಗಿ ಇಂದಿಗೂ ನಮ್ಮೊಂದಿಗಿದ್ದಾನೆ. 'ಬಬಿಯ'ನ ಲಿಂಗಪತ್ತೆಗೆ ಯಾರೂ ಹೋಗಲಿಲ್ಲ. ಹಾಗಾಗಿ ನಮಗೆ "ಬಬಿಯ ದೇವನೂ ಹೌದು, ದೇವಿಯೂ ಹೌದು." ಆಕಾರದಲ್ಲಿ ನೋಡಿದರೆ ಇದು 'ಮಗ್ಗರ್' ಪ್ರಭೇದಕ್ಕೆ ಸೇರಿದ ಮೊಸಳೆಯಂತೆ ಕಾಣುತ್ತದೆ. ನೀರೊಳಗೂ, ಭೂಮಿಯ ಮೇಲೂ ವಾಸಿಸಬಲ್ಲ ಉಭಯಜೀವಿ ಮೊಸಳೆ. ಇದರ ಆಯಸ್ಸು ಸರಿಸುಮಾರು ಮನುಷ್ಯರಂತೆಯೇ ನೂರು ವರ್ಷ. ಇದು ಒಂಟಿಯಾಗಿ ಜೀವಿಸುವ ಪ್ರಾಣಿಯಲ್ಲ. ಜಂಟಿಯಾಗಿ ಜೀವಿಸುವ ಸಸ್ತನಿ. ಹಾಗಿದ್ದೂ ಇದು ಇಲ್ಲಿ ಒಂಟಿಯೇ. ಸಿಹಿನೀರಲ್ಲಿ ಕಾಣಸಿಗುವ ಈ ಪ್ರಭೇದದ ಮೊಸಳೆಯು ಆಹಾರಕ್ಕಾಗಿ ಮೀನುಗಳನ್ನೇ ಹೆಚ್ಚಾಗಿ ಅವಲಂಬಿಸುತ್ತವೆ ಎಂದು ಓದಿ ತಿಳಿದುಕೊಂಡಿದ್ದೇನೆ. ಬೇಸಗೆಯಲ್ಲಿ ಗುಂಪಿನಲ್ಲಿ ನೀರು ಕುಡಿಯಲು ಬರುತ್ತಿದ್ದ ಪಾರಿವಾರಿಗಳನ್ನು ಹಿಡಿಯುವ ದೃಶ್ಯವನ್ನು ಬಹಳಷ್ಟು ಬಾರಿ ನಾವು ನೋಡಿದ್ದುಂಟು. ಈಗಿನ 'ಬಬಿಯ–2ಗೆ ಸರಿಸುಮಾರು ಎಪ್ಪತ್ತರಿಂದ – ಎಪ್ಪತ್ತೈದರ ಹರೆಯ.

❖ ❖ ❖

ಕ್ಷೇತ್ರದ ಒಳಗಿರುವ ದೊಡ್ಡ ಮತ್ತು ಸಣ್ಣ ಕೆರೆಯಲ್ಲಿ ಮಾತ್ರವಲ್ಲದೆ ಹೊರಗಿನ 'ತುಪ್ಪೆಕೆರೆ' (ಅಯ್ಯಪ್ಪ ಗುಡಿಯ ಸಮೀಪ) ಹಾಗೂ ನಮ್ಮ 'ಚಂಬಟೆಕೆರೆ'ಗೂ ಆಹಾರ–ವಿಹಾರಕ್ಕಾಗಿ ಬಬಿಯ ಹೋಗುತ್ತಿದ್ದ. ದೊಡ್ಡ ಮತ್ತು ಸಣ್ಣ ಕೆರೆಯ ಮಧ್ಯದ ದಂಡೆಯಲ್ಲಿ ಬಿಸಿಲಿಗೆ ಮೈ ಕಾಯಿಸಿಕೊಳ್ಳಲೂ ಬರುತ್ತಿದ್ದ. ಹಾಗೆ ಬಂದು ಮಲಗಿದವನ ಮೈಮೇಲೆ ಹಕ್ಕಿಗಳು ಕುಳಿತು ಮಜ್ಜನ ಮಾಡುವುದನ್ನೂ ನೋಡುತ್ತಿದ್ದೇವೆ. ಮಳೆಗಾಲದಲ್ಲಿ ನಮ್ಮ ಮನೆಯಂಗಳಕ್ಕೆ ಬರುತ್ತಿದ್ದ. ಬಹಳಷ್ಟು ಬಾರಿ ಚಿಕ್ಕಜ್ಜನ ಮನೆಯಂಗಳಕ್ಕೆ ಬಂದು ಮಲಗೆದ್ದು ಹೋದದ್ದಿದೆ.

ಒಂದೊಮ್ಮೆ ಚಿಕ್ಕಜ್ಜನ ಮನೆಯ ನಾಯಿ 'ದಾಸು' ದಾಸಾನುದಾಸನಾಗಿ ಮಧ್ಯ ರಾತ್ರಿಯಲ್ಲಿ ಆಲಾಪವನ್ನು ಮಾಡುತ್ತಿರಲು ಎಚ್ಚರಗೊಂಡ ಸರಸ್ವತಿ ದೊಡ್ಡಮ್ಮ ಕಿಟಕಿಯ ಹೊರಕ್ಕೆ ಟಾರ್ಚ್ ಬೆಳಕನ್ನು ಹಾಯಿಸಿದಾಗ ಕಂಡದ್ದು 'ಬಬಿಯಾ ಮತ್ತು ದಾಸು'ವಿನ ಮುಖಾಮುಖಿ. ಬೆಳಕಿಗೆ ಹಾಗೂ ದೊಡ್ಡಮ್ಮನ ಮಾತಿನ ಸದ್ದಿಗೆ ಸರಕ್ಕನೆ ಕೆಳಕ್ಕಿಳಿದು ತನ್ನ ಗೂಡಿನತ್ತ ಅಂದು ಬಬಿಯ ಹೊರಟುಹೋಗಿದ್ದ. ಹಿಂದೆಲ್ಲ ದೊಡ್ಡ ಕೆರೆಯಿಂದಲೇ ಕುಡಿಯಲು ಮತ್ತು ನಿತ್ಯೋಪಯೋಗಕ್ಕೆಂದು ನೀರನ್ನು ಅಮ್ಮ – ದೊಡ್ಡಮ್ಮಂದಿರು ತರುತ್ತಿದ್ದರು. ಮುಂಜಾನೆ ಐದು ಗಂಟೆಗೆ ನೀರನ್ನು ತರಲು ಟಾರ್ಚ್ ಬೆಳಕಲ್ಲಿ ಹೋದಾಗ ಅಲ್ಲೇ ಕೆರೆದಂಡೆಯ ಮೇಲೆ ಮಲಗಿ ವಿಶ್ರಮಿಸುತ್ತಿದ್ದ ಬಬಿಯನ ಮೇಲೆ ಬೆಳಕನ್ನು ಚೆಲ್ಲಿ, 'ಬಬಿಯಾ... ಬಬಿಯಾ" ಎಂದು ಕೂಗಿದರೆ ದುಡುಮ್ಮನೆ ನೀರಿಗೆ ಜಿಗಿದು ನೀರನ್ನೆತ್ತಲು ಅನುವು ಮಾಡಿಕೊಡುತ್ತಿದ್ದ. ಅವನ ಸಂಚಾರ ವಿಶೇಷವಾದದ್ದೇನಲ್ಲ. ಅದು ಸಹಜವೂ, ಕಾರ್ಯಕಾರಣವೂ ಆಗಿರುವಂತದ್ದು.


ಅಂದು ದ್ವಿತೀಯ ಪಿ.ಯು.ಸಿ. ಪರೀಕ್ಷೆ ಮುಗಿಸಿ ಬಂದಿದ್ದೆ. ಮಟಮಟ ಮಧ್ಯಾಹ್ನ ಬೇರೆ. ಮಾಳಿಗೆಯಲ್ಲಿರುವ ಪಪ್ಪನ ಕೋಣೆಯಲ್ಲಿರುವಾಗ ದೇವಸ್ಥಾನದ ಕಡೆಯಿಂದ 'ಭಡಾರ್...' ಎಂಬ ಸದ್ದಿನೊಂದಿಗೆ ಜನರ ಕಿರುಚಾಟವೂ ಕೇಳಿತು. ಕಿಟಕಿಯಿಂದಲೇ ಕಾಣುವ ದೇವಳದತ್ತ ಏನೆಂದು ಇಣುಕು ಹಾಕಿದರೆ ಜನರ ಕೈ ಬಾಯಿಗಳ ಸದ್ದು ಜೋರಾಗುತ್ತಿತ್ತು. ಏನೆಂದು ತಿಳಿಯಲು ಅತ್ತ ಧಾವಿಸಿದೆ. ಎಲ್ಲರೂ ಮೊಸಳೆಯ ಗುಹೆಯತ್ತಲೇ ನೋಡುತ್ತಿದ್ದರು. ಆಗಬಾರದ್ದೇನೋ ಆಗಿದೆ ಎಂದುಕೊಂಡು ಥಟ್ಟನೆ ಕಡಿದಾದ ಗುಹೆಯ ಕೆಳಭಾಗಕ್ಕಿಳಿದೆ. ನೋಡಿದರೆ; ಗುಹೆಯೆದುರು ಬಾಯಗಲಿಸಿದ್ದ ಬಬಿಯನ ಮುಂದೆ ಬಿದ್ದ 'ನಂಬೀಶನ್' ಏಳುವ ಸಾಹಸದಲ್ಲಿ ಹೆದರಿ ಬೆವರುತ್ತಿದ್ದರು. ಬೇಸುಗೆಯಾದ್ದರಿಂದ ನೀರು ದೊಡ್ಡ ಕೆರೆಯಲ್ಲಿ ಕಡಿಮೆಯಿತ್ತು. ತಾನಿದ್ದ ಸ್ಥಿತಿಯಿಂದ ಒಂದಿನಿತೂ ಕದಲದೆ ಬಬಿಯ ಮಾತ್ರ ಹಾಗೆಯೇ ಇದ್ದುಬಿಟ್ಟಿದ್ದ.

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.)*

**ಲೇಖಕರು : ಶ್ರೀ ಸಂತೋಷ ಅನಂತಪುರ ಬೆಂಗಳೂರು ಮೊಬೈಲ್ : 9845719566**

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
**Mobile : 9449903002**

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. LAXMI PRASAD**
ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com




## ಜ್ಞಾನ – ನುಡಿ

ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ, ಅದೇ ಶ್ರೇಷ್ಠ ಸರ್ಕಾರ.

– **ಮೆಕಾಲೆ**

## ಜ್ಞಾನ – ಗಾದೆ

- ಸಿತ್ತ್ ಸೂತ್ ನಡೆಪುನಾಯೆ ದಂಟಯೆ.
- ಡೋಲು ಮಲ್ಲೊ, ಕೋಲು ಎಳ್ಯೊ.
- ದಡ್ಡ ದೋಸ್ತಿತ್ತ್, ಬುದ್ದಿವಂತ ವೈರಿಯೇ ಎಡ್ಡೆ.

## ಜ್ಞಾನ – ನಗೆ

**ಗುಂಡ** : ನಿನ್ನೆ ನೂಡಲ್ಸ್ ತಿಂದಂತೆ ಕನಸು ಬಿತ್ತು.

**ತಿಮ್ಮ** : ಆಮೇಲೆ ಏನಾಯ್ತು?

**ಗುಂಡ** : ಬೆಳಗ್ಗೆ ಎದ್ದು ನೋಡಿದರೆ ಪಕ್ಕದಲ್ಲಿಯೇ ಇಟ್ಟಿದ್ದ ಹೆಡ್‌ಫೋನ್ ಕಾಣಿಸುತ್ತಿರಲಿಲ್ಲ !

## ಜ್ಞಾನ – ವಿಸ್ಮಯ

ಚೀನಾದಲ್ಲಿ ವಾಸಿಸುವ 'ಕಿವಾ' ಎಂಬ ಜನಾಂಗದವರ ವಿಚಿತ್ರ ಸಂಪ್ರದಾಯ ಹುಡುಗಿಗೆ 12 ವರ್ಷವಾದಾಗ ಅವಳನ್ನು ಹಳ್ಳಿಯ ಸಮೀಪ ಇರುವ ಕರೆಯ ಹತ್ತಿರ ಒಯ್ದು ಪೂಜೆ ಮಾಡಿ ನೀರಿನಲ್ಲಿ ಕಾಣುವ ಅವಳ ನೆರಳಿಗೆ ಮದುವೆಯನ್ನು ಮಾಡುತ್ತಾರೆ. ಹಾಗೆ ಮಾಡುವುದರಿಂದ ಮುಂದೆ ಅವಳಿಗೆ ನಿಜವಾಗಿ ಮದುವೆಯಾದಾಗ ಕಷ್ಟಗಳು ಬರುವುದಿಲ್ಲವೆಂದು ಅವರ ನಂಬಿಕೆ!

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3
Editor : Sri M. S. Raghunath Rao, Darbe, Puttur
Printed at : Rajesh Power Press, Darbe - 574 202, Puttur, D. K.